ಕಾಮಗಾರಿ ಮುಗಿಯಬೇಕಾಗಿತ್ತು ಅದು ಮುಗಿದಿಲ್ಲ. ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎನ್ನುತಕ್ಕ ಪ್ರಶ್ನೆ ಮಾಡಿದ್ದಾರೆ. ಈಗಾಗಲೇ ನಾವು ಕಾಂಟ್ರಾಕ್ಟರ್ ಮೇಲೆ ಫೈನಾಲ್ಟಿಯನ್ನು ಹಾಕಿದ್ದೇವೆ. ಆದರೆ ಒಂದೇ ಸಾರಿ ಕಾಂಟ್ರಾಕ್ಟರ್‌ಗೆ ಏನಾದರೂ ಮಾಡಿದರೆ ಅವರು ಕೋರ್ಟಿಗೆ ಹೋಗುತ್ತಾರೆ ಎನ್ನುವ ಉದ್ದೇಶದಿಂದಲೇ ನಾವು ಅವರಿಗೆ ಒಂದು ಸಾರಿ ಎರಡು ಸಾರಿ ಅವಕಾಶವನ್ನು ಕೊಟ್ಟಿದ್ದೇವೆ. ನಾನು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಅವರೇನಾದರೂ ಮಾಡುವುದಿಲ್ಲ ಎನ್ನುವ ಸನ್ನಿವೇಶಕ್ಕೆ ಬಂದರೆ ಅವರನ್ನು ವಜಾ ಮಾಡುವುದಕ್ಕೂ ನಾವು ರೆಡಿ ಇದ್ದೇವೆ. ಅದರಲ್ಲೇನೂ ಯಾವ ದಾಕ್ಷಿಣ್ಯವೂ ಇಲ್ಲ, ಆದರೆ ಅವರೇನಾದರೂ ಕೋರ್ಟಿಗೆ ಹೋಗಿ ಮತ್ತೆ ಎರಡು-ಮೂರು ವರ್ಷ ಕೆಲಸ ಕುಂಠಿತವಾಗುತ್ತದೆ ಎನ್ನುವ ದೃಷ್ಟಿಯಲ್ಲಿ ನಾವು ಇದನ್ನು ಮಾಡಿದ್ದೇವೆ. ತಾವೇನು ಹೇಳಿದ್ದೀರಿ, ಅದನ್ನು ನಾನು ಸಂಬಂಧಪಟ್ಟ ಅಧಿಕಾರಿಗಳ ಕಡೆಯಿಂದ ಯಾರು ಕಂಟ್ರಾಕ್ಟರ್ ಇದ್ದಾರೆ, ಅವರು ಕೂಡಲೇ ಕಾಮಗಾರಿಯನ್ನು ಮುಗಿಸುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ. ಅವರೇನಾದರೂ ಮಾಡುವುದಿಲ್ಲವೆಂದರೆ ಅವರ ಮೇಲೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳುವುದಕ್ಕೂ ನಾನು ಸಿದ್ಧನಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಓಡಾಡುವುದಕ್ಕೆ ಯೋಗ್ಯವಾದ ರೀತಿಯಲ್ಲಾದರೂ Pothole ನ್ನಾದರೂ ಮಾಡಿಸಿ.

ಅಧ್ಯಕ್ಷರು : ಹೇಳಿದ್ದಾರಲ್ಲಪ್ಪ, ಆಯಿತು. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು.

(ಐ) ವಿಷಯ : ಹಲಸೂರು ಲೇಕ್‌ನಲ್ಲಿ ಮೀನುಗಳ ಸಾವಿನ ಬಗ್ಗೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ ಇವತ್ತು ಬೆಳಿಗ್ಗೆ ಹಲವಾರು ಪತ್ರಿಕೆಗಳಲ್ಲಿ ನಾವೊಂದು ಸುದ್ದಿಯನ್ನು ಓದಿದ್ದೇವೆ. ಹಲಸೂರು ಲೇಕ್‌ನಲ್ಲಿ ಮೀನುಗಳ ಸಾವು" ಎಂಬ ವಿಚಾರ ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಅದಕ್ಕೆ ಅಧಿಕಾರಿಗಳ ಹೇಳಿಕೆ ಪತ್ರಿಕೆಯಲ್ಲಿ ಬಂದಿರುವಂತೆ Deplutation of oxgen ಕಾರಣ ಇತ್ತೀಚೆಗೆ ಕಾರ್ಪೋರೇಷನ್‌ನವರು ಲಕ್ಷಾಂತರ ರೂಪಾಯಿ ಖರ್ಚನ್ನು ಮಾಡಿ ಶುದ್ಧೀಕರಣವನ್ನು ಮಾಡಿದಂತಹ ಒಂದು ಕೆರೆಯಲ್ಲಿ ಆಕ್ಸಿಜನ್ ಡಿಪ್ಲೀಷನ್ ಹೇಗೆ ಆಗುತ್ತದೆ ಎಂಬುದು ನನಗೆ ಗೊತ್ತಿಲ್ಲ. ಒಂದು ಸುದ್ದಿ ಪ್ರಕಾರ ಹಲಸೂರು ಲೇಕ್‌ನಲ್ಲಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಕೆಮಿಕಲ್ಸ್ ಹಾಕಿ ಅದನ್ನೆಲ್ಲಾ ವಾಶ್ ಮಾಡಿ ಅದನ್ನು ಹಲಸೂರು ಕೆರೆಗೆ ಬಿಟ್ಟಿದ್ದರಿಂದ ಈ ಮೀನುಗಳ ನಾವು ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಮಾನ್ಯ ಮೀನುಗಾರಿಕೆ ಸಚಿವರು ಯಾರು ಎಂದು ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲು ಇಚ್ಛೆಪಡುತ್ತೇನೆ. ಅವರು ಅದರ ಬಗ್ಗೆ ತನಿಖೆ ಮಾಡಬೇಕು. ತನಿಖೆ ಮಾಡಿ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾನು ಯಾರಿಗೆ ವಿಷಯ ಹೇಳಿದೆ ಎಂಬುದು ನನಗೇ ಗೊತ್ತಿಲ್ಲ. ನಾನು ಏನನ್ನು ಹೇಳಿದೆ? ಯಾರಿಗೆ ಹೇಳಿದೆ ಎಂದು ನನಗೇ ಗೊತ್ತಿಲ್ಲ. ಉತ್ತರ ಯಾರು ಕೊಡುತ್ತಾರೆಂದು ನನಗೆ ಗೊತ್ತಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮೂರು-ನಾಲ್ಕು ದಿವಸದಿಂದ ಸಾವಿರಾರು ಮೀನುಗಳು ಸತ್ತು ಹೋಗಿವೆ ಎಂದು ಹೇಳಿ ಇವತ್ತು ಪತ್ರಿಕೆಯಲ್ಲಿ ಬಂದಿರತಕ್ಕ ಮಾಹಿತಿಯನ್ನು ಆಧರಿಸಿ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಈಗಾಗಲೇ ಸರ್ಕಾರದ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ.

143-12 143-12

ಅದಕ್ಕೆ ಕಾರಣವೇನು? ಯಾಕೆ ಹೀಗಾಗಿದೆ ಎನ್ನುವ ಬಗ್ಗೆಯೂ ವಿಚಾರಣೆ ಮಾಡುತ್ತೇವೆ. ಈ ರೀತಿ ಆಗದ ಹಾಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಬಗ್ಗೆ ಸೂಕ್ತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

(ಒ) ವಿಷಯ : ಸಿರಗುಪ್ಪದಲ್ಲಿ ನಡೆದ ಪೋಲೀಸ್ ಲಾಠಿ ಛಾರ್ಜ್ ಬಗ್ಗೆ

ಶ್ರೀ ಎಂ. ಎಸ್. ಸೋಮಲಿಂಗಪ್ಪ ಸಿರಗುಪ್ಪ) : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಪೋಲೀಸ್ ಲಾಠಿ ಛಾರ್ಜ್‌ನಿಂದು ಒಬ್ಬರು ಸತ್ತಿದ್ದಾರೆ. ಅದರ ಬಗ್ಗೆ ಒಂದು ನಿಮಿಷ ಮಾತನಾಡಬೇಕು.

ಅಧ್ಯಕ್ಷರು : ನಾಳೆ ನಿಮಗೆ ಅವಕಾಶ ಕೊಡುತ್ತೇನೆ. ನೀವು ನೋಟೀಸ್ ಕಳುಹಿಸಬೇಕು.

ಶ್ರೀ ಎಂ.ಹೆಚ್.ಎಸ್. ಸೋಮಲಿಂಗಪ್ಪ : ನೋಟೀಸ್ ಕಳುಹಿಸಿ ಮೂರು ದಿವಸ ಆಯಿತು

ಅಧ್ಯಕ್ಷರು : ನೋಟೀಸ್ ಕಳುಹಿಸಿ ನಾಳೆ ಅವಕಾಶ ಮಾಡಿಕೊಡುತ್ತೇನೆ.

ಓ) ಕರ್ನಾಟಕ ರಾಜ್ಯ ಪತ್ರದಲ್ಲಿ ಸರ್ಕಾರಿ ಆದೇಶಗಳ ಆಂಗ್ರಭಾಷೆಯಲ್ಲಿ ಪ್ರಕಟವಾಗುತ್ತಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಒಂದು ನಿಮಿಷ ಹೇಳುತ್ತೇನೆ. ಸ್ವಲ್ಪ ಕುಳಿತುಕೊಳ್ಳಿ. ತಾವು ಏಳುವ ಉದ್ವೇಗದಲ್ಲಿ ನಾನು ಏನು ಹೇಳಬೇಕು ಎಂದು ಅರ್ಥ ಆಗುವುದಿಲ್ಲ. ಈ ಸರ್ಕಾರದ ನೀತಿ 'ಆಡಳಿತ ಭಾಷೆ ಕನ್ನಡ' ಮಾನ್ಯ ಮುಖ್ಯಮಂತ್ರಿಗಳಲ್ಲಿ ಗಮನ ಸೆಳೆಯುತ್ತಿದ್ದೇನೆ. ಸರ್ಕಾರದ ನೀತಿ ಹಾಗು ಆಡಳಿತ ಭಾಷೆ ಕನ್ನಡ. ಆದರೆ ಸರ್ಕಾರದ ಎಲ್ಲಾ ಆದೇಶಗಳೂ ಇಂಗ್ಲೀಷ್‌ನಲ್ಲಿವೆ. ಉತ್ತರ ಕೊಟ್ಟಿರತಕ್ಕದ್ದು ಇಂಗ್ಲೀಷ್, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಕನ್ನಡದಲ್ಲಿ ಕೊಡಲೇ ಇಲ್ಲ, ಇದು ಇಂಗ್ಲೀಷ್‌ನಲ್ಲಿದೆ. ಐಪಿಡಿ ಸಾಲಪ್ಪನವರು ಪೌರ ಕಾರ್ಮಿಕರಿಗೆ ಸೌಲಭ್ಯಗಳನ್ನು ಕೊಡುವ ಬಗ್ಗೆ ಅವರು ಕೊಟ್ಟಿರತಕ್ಕ ವರದಿ ಯಥಾವತ್ತಾಗಿ ಇಂಗ್ಲೀಷ್‌ನಲ್ಲಿ ಹಾಕಿದ್ದಾರೆ. ಇದರ ಜೊತೆಗೆ ಕರ್ನಾಟಕ ರಾಜ್ಯ ಪತ್ರದ ಪ್ರತಿ ಒಂದು ಆದೇಶಗಳೂ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನೋಡಿ ಎಲ್ಲಾ ಇಂಗ್ಲೀಷ್‌ನಲ್ಲಿದೆ. ಒಂದಾದರೂ ಕನ್ನಡದಲ್ಲಿ ಇದೆಯೇ? ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ನೋಡಿ ಪ್ರತಿ ಒಂದು ಆದೇಶ ಇಂಗ್ಲೀಷ್‌ನಲ್ಲಿದೆ. ನಮಗೆ ಒದಗಿಸಿರುವುದು, ಇಡೀ ಸದನಕ್ಕೆ ಒದಗಿಸಿರುವುದು ಎಲ್ಲಾ ಕನ್ನಡ ಇದೆಯೇ, ಇಲ್ಲ ಇಂಗ್ಲೀಷ್‌ನಲ್ಲಿದೆ. ತಮಗೆ ಹೇಳುತ್ತೇನೆ. ಇದರಲ್ಲಿ ಯಾವುದಾದರಾದರೂ ಒಂದರ ಬಗ್ಗೆ ಸರ್ಕಾರದ ನಿಲುವು ಏನು?

ಅಧ್ಯಕ್ಷರು : ಉತ್ತರ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ನಿಲುವು ಏನು ಎಂಬುದನ್ನು ಹೇಳಲಿ.

ಅಧ್ಯಕ್ಷರು : ಸರ್ಕಾರದ ನಿಲುವನ್ನು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯಪತ್ರ–ಮೇಲೆ ಹೆಸರಿಗೆ ರಾಜ್ಯಪತ್ರ: ಆದರೆ ಎಲ್ಲಾ ಆದೇಶ ಇಂಗ್ಲೀಷ್‌ನಲ್ಲಿದೆ. ಆದರೆ ರಾಜ್ಯಪತ್ರದ ಹೆಸರು ಕನ್ನಡದಲ್ಲಿ ಇದೆ. ಇದರ ಬಗ್ಗೆ ನಾವೇನು ಮಾಡಬೇಕು? ಇದರ ಬಗ್ಗೆ ನಾವು ಮಾತನಾಡಬೇಕೇ ಅಥವಾ ಬಿಡಬೇಕೇ? ತಾವು ಹೇಳಿ, ಸರ್ಕಾರದ ನೀತಿ ಬಗ್ಗೆ ಹೇಳಲಿ. ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೆ, ಮಾನ್ಯ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.